ಶ್ರೀ ಎ. ಲಕ್ಷ್ಮೀಸಾಗರ್.—ವಿದ್ಯುತ್ ಮಂಡಲಿಗೆ 28-12-84ರಲ್ಲಿ ಹಣವನ್ನು ಒದಗಿಸಿ ಕೊಡಲಾಗಿದೆ. ಕೊಳವೆ ಬಾವಿಗಳನ್ನು ಹಾಕಿಕೊಡುವ ಬಗ್ಗೆ ಕೇಶವಮೂರ್ತಿಯವರನ್ನು ಭೇಟಿ ಮಾಡುವುದಕ್ಕೆ ಹೇಳುತ್ತೇನೆ ; ಅವರ ಭೇಟಿಯ ನಂತರ ಆ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇವೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಎ. ಲಕ್ಷ್ಮೀಸಾಗರ್. – ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಸಂಬಂಧಪಟ್ಟ ಉತ್ತರಗಳನ್ನು ಸಭೆಯ ಮುಂದಿಡುತ್ತಿದ್ದೇನೆ.

ಅಧ್ಯಕ್ಷರು.—ಉತ್ತರಗಳನ್ನು ಮಂಡಿಸಲಾಯಿತು.

ಲಿಖಿತ ಮೂಲಕ ನೀಡಲಾದ ಉತ್ತರಗಳು

ವಿಷಯ.—ದಾವಣಗೆರೆ ನಗರದಲ್ಲಿ ಸಾರಿಗೆ ವ್ಯವಸ್ಥೆಯ ಕೊರತೆ

ಪ್ರ. ಸಂಖ್ಯೆ 25 (232) ಶ್ರೀ ಪಂಪಾಪತಿ, (ದಾವಣಗೆರೆ) —.ಮಾನ್ಯ ಸಾರಿಗೆ ಹಾಗೂ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ದಾವಣಗೆರೆ ನಗರಕ್ಕೆ ಶಿಕ್ಷಣ, ವ್ಯಾಪಾರ ವಹಿವಾಟು ಇತ್ಯಾದಿಗಳಿಗಾಗಿ ಸುತ್ತಮುತ್ತಲಿನ ಗ್ರಾಮಗಳಿಂದ ಹೆಚ್ಚು ಜನರು ಬಂದು ಹೋಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ;

ಆ) ಇದರಿಂದಾಗಿ ಈಗಿರುವ ಸಾರಿಗೆ ವ್ಯವಸ್ಥೆ ಸಾಕುಗುತ್ತಿಲ್ಲ ಎಂಬುದು ಸರಕಾರದವರ ಗಮನಕ್ಕೆ ಬಂದಿದೆಯೆ ;

ಇ) ಹಾಗಿದ್ದಲ್ಲಿ ಸದರೀ ಜನರ ಉಪಯೋಗಕ್ಕೆ ಹೆಚ್ಚಿನ ಸಾರಿಗೆ ಸೌಲಭ್ಯವನ್ನೆ ಒದಗಿಸಲು ಸರಕಾರದವರು ಕ್ರಮ ಕೈಗೊಳ್ಳುವರೆ ?

ಶ್ರೀ ಎಂ.ಪಿ. ಪ್ರಕಾಶ್.—ಸಾರಿಗೆ ಮತ್ತು ವಸತಿ ಸಚಿವರು.—

ಅ) ಬಂದಿವೆ.

ಆ) ಸಾಧ್ಯವಾದ ಮಟ್ಟಿಗೆ ಸಾರಿಗೆ ವ್ಯವಸ್ಥೆಯನ್ನು ಒದಗಿಸಲಾಗಿದೆ. ಆದಂದರೆ ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆಯು ಏಕಸ್ವಾಮಿತ್ವಕ್ಕೆ ಒಳಪಟ್ಟಿರುವ ಪ್ರದೇಶದ ಮಾರ್ಗಗಳಲ್ಲಿ ಪ್ರಯಾಣಿಕರ ಅನುಕೂಲಕ್ಕಾಗಿ ಸಾಕಷ್ಟು ಸಾರಿಗೆ ಸಂಚಾರ ವ್ಯವಸ್ಥೆ ಮಾಡಲಾಗಿದೆ.

ಇ) ಪ್ರಯಾಣಿಕರ ಅವಶ್ಯಕತೆ ಮತ್ತು ಸಾರಿಗೆ ಸಂಸ್ಥೆಯ ಆರ್ಥಿಕ ಸ್ಥಿತಿಗನುಗುಣವಾಗಿ ಕ್ರಮ ಕೈಗೊಳ್ಳಲಾಗುವುದು.

ವಿಷಯ.—ದಾವಣಗೆರೆ ನಗರದಲ್ಲಿ ವಸತಿ ಸೌಲಭ್ಯದ ಕೊರತೆ

ಪ್ರ. ಸಂಖ್ಯೆ 26 (234) ಶ್ರೀ ಪಂಪಾಪತಿ (ದಾವಣಗೆರೆ).—ಮಾನ್ಯ ಸಾರಿಗೆ ಹಾಗೂ ವಸತಿ ರಾಜ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ದಾವಣಗೆರೆ ನಗರದಲ್ಲಿ ವಸತಿ ಸೌಲಭ್ಯದ ಕೊರತೆಯಿಂದಾಗಿ ತುಂಬಾ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ ವಸತಿ ಮತ್ತು ಗೃಹ ನಿರ್ಮಾಣ ಮಂಡಲಿಯಿಂದ ಮನೆಗಳನ್ನು ಕಟ್ಟಿಸಲು ಯೋಚಿಸಲಾಗಿದೆಯೇ, ಹಾಗಿದ್ದಲ್ಲಿ ಯಾವಾಗ ಮನೆಗಳನ್ನು ನಿರ್ಮಿಸಲಾಗುವುದು ?

ಶ್ರೀ ಎಂ.ಪಿ. ಪ್ರಕಾಶ್.—(ವಸತಿ ಹಾಗೂ ಸಾರಿಗೆ ರಾಜ್ಯ ಮಂತ್ರಿಯವರು):—

ಅ) ಹೌದು.

ಆ) ಈ ಬಗ್ಗೆ ಗೃಹ ಮಂಡಳಿಯು ವಸತಿ ಯೋಜನೆಗೆ ಬೇಕಾದ ದಾವಣಗೆರೆ ನಗರಕ್ಕೆ ಸಮೀಪದ ನಿಟ್ಟುವಳ್ಳಿ ಮತ್ತು ಅವರೆಗೆರೆ ಗ್ರಾಮಗಳ ಸುಮಾರು 67 ಎಕರೆ 37 ಗುಂಟೆ ಜಮೀನನ್ನು ಗುರುತಿಸಿ ಭೂ ಸ್ವಾಧೀನಕ್ಕಾಗಿ ವಿಶೇಷ ಜಿಲ್ಲಾಧಿಕಾರಿಗಳನ್ನು ಕೋರಲಾಗಿದೆ ಹಾಗೂ ಈ ಬಗ್ಗೆ ಅಧಿಕಾರಿಗಳೊಂದಿಗೆ ಸಂಪರ್ಕಿಸಲಾಗುತ್ತಿದೆ. ಜಮೀನು ಮಂಡಳಿಯ ವಶಕ್ಕೆ ಬಂದ ತಕ್ಷಣ ವಸತಿಯೋಜನೆಯನ್ನು ರೂಪಿಸಲಾಗುವುದು.

ವಿಷಯ.—ಮೋಟಾರು ವಾಹನ ಇಲಾಖೆಯ ಸಿಬ್ಬಂದಿ ಮುಂಬಡ್ತಿಯಲ್ಲಿರುವ ತಾರತಮ್ಯ

ಪ್ರ. ಸಂಖ್ಯೆ 27 (122) ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ).—ಮಾನ್ಯ ಸಾರಿಗೆ ಹಾಗೂ ವಸತಿ ರಾಜ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?